'ಸತಿ ಸುಲೋಚನ' ಚಿತ್ರದಲ್ಲಿ ತ್ರಿಪುರಾಂಬ



ಎಂ.ವಿ. ರಾಜಮ್ಮ



# ಹೆಣ್ಣು ಸಿನಿಮಾದ ಕಣ್ಣು!

**ಕನ್ನಡ ಚಿತ್ರರಂಗದ ಇತಿಹಾಸವನ್ನು ಮಹಿಳಾ ದೃಷ್ಟಿಕೋನದಿಂದ ನೋಡಿದರೆ ಕಾಣಿಸುವ ಬಿಂಬಗಳು ಚಿತ್ರರಸಿಕರ ರೂಢಿಗತ ನಂಬಿಕೆಯನ್ನು ಬುಡಮೇಲು ಮಾಡುವಂತಿವೆ. ಒಲವು, ಚೆಲುವಿನ ಜೊತೆಗೆ ಪೊರೆಯುವ ದೃಷ್ಟಿಯಿಂದಲೂ ಕನ್ನಡ ಚಿತ್ರರಂಗದಲ್ಲಿ ಸ್ತ್ರೀಶಕ್ತಿ ಮಹತ್ವದ ಪಾತ್ರ ವಹಿಸಿದೆ.**

■ **ಚ.ಹ.ರಘುನಾಥ**

**ಕ**ನ್ನಡ ಚಿತ್ರರಂಗದ ಮೊದಲ ಸೂಪರ್ ಸ್ಟಾರ್ ಯಾರು?

ನಾಗೇಂದ್ರರಾವ್, ಸುಬ್ಬಯ್ಯನಾಯ್ಡು, ರಾಜ್‌ಕುಮಾರ್, ಪುಟ್ಟಣ್ಣ ಕಣಗಾಲ್ – ಹೀಗೆ ಆಯ್ಕೆಗಳನ್ನು ಯೋಚಿಸುವಿರಾದರೆ, ಈ ಎಲ್ಲ ಉತ್ತರಗಳು ತಪ್ಪು. ಏಕೆಂದರೆ, ಕನ್ನಡದ ಮೊದಲ ಸ್ಟಾರ್ ಗಂಡಲ್ಲ, ಹೆಣ್ಣು! ಲಕ್ಷ್ಮೀಬಾಯಿ ಹಾಗೂ ಕಮಲಾಬಾಯಿ ಸೋದರಿಯರು ಈ ಸೂಪರ್ ಸ್ಟಾರಿಣಿಯರು.

ಮೂಕಿ ಚಿತ್ರಯುಗದಲ್ಲಿ ಬೇಡಿಕೆಯ ತಾರೆಯರಾಗಿದ್ದ ಈ ಸೋದರಿಯರು 'ಸೂರ್ಯ ಫಿಲ್ಮ್ಸ್' ಕಂಪೆನಿಯ ಸಾಲು ಸಾಲು ಚಿತ್ರಗಳಲ್ಲಿ ನಟಿಸಿದರು. ಹಾಗಾಗಿ ಅವರಿಗೆ 'ಸೂರ್ಯ ಸ್ಟಾರ್ಸ್' ಎನ್ನುವ ವಿಶೇಷಣ. 1934ರಲ್ಲಿ ತೆರೆ ಕಂಡ ಕನ್ನಡದ ಮೊದಲ ವಾಕ್ಚಿತ್ರ 'ಸತಿ ಸುಲೋಚನಾ'ದಲ್ಲಿ ಲಕ್ಷ್ಮೀಬಾಯಿ ಮಂಡೋದರಿಯ ಪಾತ್ರದಲ್ಲಿ ನಟಿಸಿದ್ದರು. ಕಮಲಾಬಾಯಿ ಕೂಡ ಪುಟ್ಟ ಪಾತ್ರವೊಂದರಲ್ಲಿ ನಟಿಸಿದ್ದರು. ಸುಲೋಚನಾ ಪಾತ್ರದಲ್ಲಿ ನಟಿಸಿದ್ದ ತ್ರಿಪುರಾಂಬ ಕನ್ನಡ ವಾಕ್ಚಿತ್ರದ ಮೊದಲ ನಾಯಕಿ.

ಯಾವುದೇ ಭಾಷೆಯ ಚಲನಚಿತ್ರ ಚರಿತ್ರೆಯನ್ನು ಅವಲೋಕಿಸುವ ಸಂದರ್ಭದಲ್ಲಿ ಪ್ರಮುಖ ಮೈಲಿಗಲ್ಲುಗಳ ರೂಪದಲ್ಲಿ ನಾಯಕರನ್ನು, ನಿರ್ದೇಶಕರನ್ನು ಗುರ್ತಿಸಲಾಗುತ್ತದೆಯೇ ಹೊರತು, ನಾಯಕಿಯರನ್ನೋ ನಿರ್ದೇಶಕಿಯರನ್ನೋ ಅಥವಾ ಉದ್ಯಮದ ಬೇರೊಂದು ಕ್ಷೇತ್ರದಲ್ಲಿ ಸಾಧನೆ ಮಾಡಿದ ಮಹಿಳೆಯನ್ನೋ ಅಲ್ಲ. ಎಲ್ಲ ರೀತಿಯ ಚರಿತ್ರೆಯಲ್ಲೂ ಹೆಣ್ಣು ಎರಡನೆಯವಳಾಗಿಯೇ ಉಳಿದಿದ್ದಾಳೆ. ಈ ಹಿನ್ನೆಲೆಯಲ್ಲಿ ಚಿತ್ರರಂಗವನ್ನು ಸ್ತ್ರೀ ಸಂವೇದನೆಯ ದೃಷ್ಟಿಯಿಂದ ನೋಡಿದರೆ, ನಾವು ಕಾಣುವ ಸಿನಿಮಾ ಇತಿಹಾಸಕ್ಕೆ ಹೊಸತೊಂದು ಆರ್ದ್ರತೆ ದೊರೆಯುವ ಸಾಧ್ಯತೆ ಇದ್ದೇ ಇದೆ.

ಕನ್ನಡ ಚಿತ್ರರಂಗದ ಸುಮಾರು ಎಂಟೂವರೆ ದಶಕಗಳ ಇತಿಹಾಸದಲ್ಲಿ ಮಹಿಳಾ ಹೆಜ್ಜೆಗಳನ್ನು ಮೂರು ರೀತಿಯಲ್ಲಿ ಗುರ್ತಿಸಬಹುದು.



ವಿನ್ಯಾಸ: ದಿಲ್